ದಿವಾಣಿ ನ್ಯಾಯಾಲಯ ಮತ್ತು ಜೆ. ಎಮ್. ಎಫ್. ಸಿ. ನ್ಯಾಯಾಲಯ, ಜೇವರ್ಗಿ.

ಸಿಸಿ ನಂ.33/2019

ಚಾಸಾ-1/ಪಿಡಬ್ಲೂ-4

ಹೆಸರು	ಕಪೀಲದೇವ
ತಂದೆ ಹೆಸರು	ಅಂಬಾರಾವ
ವಯಸ್ಸು	47 ವರ್ಷಗಳು
ಉದ್ಯೋಗ	ಸಿ ಪಿ ಐ
ವಾಸ ಸ್ಥಳ	ಚಿಂಚೋಳಿ

ದಿನಾಂಕ 13.05.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭೀಯೋಜಕರಿಂದ.

2014 ರಿಂದ 2016 ರವರೆಗೆ ನೆಲೋಗಿ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 26.06.2015 ರಂದು ರಂದು ರಾತ್ರಿ 12.30 ನಾನು ಗಸ್ತ ಕರ್ತವ್ಯದಲ್ಲಿದ್ದಾಗ ದೂರವಾಣಿ ಮುಖಾಂತರ ಹಳವಾರ ಸೀಮಾಂತರದ ಭೀಮಾನದಿಯಲ್ಲಿ ಟ್ರ್ಯಾಕ್ಟರನಲ್ಲಿ ಅಕ್ರಮವಾಗಿ ಮರಳು ತುಂಬುತ್ತಿದ್ದಾರೆಂದು ಬಾತ್ಮಿ ಬಂದಿರುತ್ತದೆ. ನಂತರ ನಾನು ಚಾಸಾ-2 ಮತ್ತು 3 ರವರನ್ನು ಬರಮಾಡಿಕೊಂಡು ದಾಳಿ ವಿಚಾರ ತಿಳಿಸಿ, ನಾನು, ಚಾಸಾ-2 ರಿಂದ 5 ರವರು ಸೇರಿ ರಾತ್ರಿ 2.30 ಗಂಟೆಗೆ ಹರವಾಳದ ಭೀಮಾ ನದಿಗೆ ಹೋಗಿ ನೋಡಲಾಗಿ ಅಲ್ಲಿ ಒಬ್ಬ ವ್ಯಕ್ತಿ ಒಂದು ಟ್ರ್ಯಾಕ್ಟರನಲ್ಲಿ ಮರಳು ತುಂಬುತ್ತಿದ್ದು ನಮ್ಮನ್ನು ನೋಡಿ ಟ್ರ್ಯಾಕ್ಟರನಲ್ಲಿದ್ದ ಮರಳನ್ನು ಡಂಪ್ ಮಾಡಿ ಅಲ್ಲೇ ಬಿಟ್ಟು ಹೋದನು. ನಂತರ ನಾವು ಟ್ರ್ಯಾಕ್ಟರನ್ನು ಪರಿಶೀಲಿಸಲಾಗಿ ಅದು ನೀಲಿ ಬಣ್ಣದ ಸ್ವರಾಜ ಕಂಪನಿಯ ಟ್ರ್ಯಾಕ್ಟರ ಇದ್ದು ಅದಕ್ಕೆ ನಂಬರ ಇರಲಿಲ್ಲ. ಟ್ರಾಲಿಗೆ ನಂಬರ ಇರಲಿಲ್ಲ ಆದರೆ ಅದರ ಮೇಲೆ ಅಂಬೇಕರ ಎಂದು ಬರೆದಿತ್ತು.

ನಂತರ ನಾನು ಪಂಚನಾಮೆಯನ್ನು ರಾತ್ರಿ 2.30 ರಿಂದ 3.30 ರವರೆಗೆ ಪಂಚರ ಸಮಕ್ಷಮ ಜರುಗಿಸಿ ಟ್ರ್ಯಾಕ್ಟರ ಹಾಗೂ ಟ್ರಾಲಿಯನ್ನು ವಶಪಡಿಸಿಕೊಂಡಿರುತ್ತಾರೆ. ನಂತರ ಬೆಳಗಿನ ಜಾವ 5.00 ಗಂಟೆಗೆ ಟ್ರ್ಯಾಕ್ಟರ, ಟ್ರಾಲಿ ಮತ್ತು ಜಪ್ತಿ ಪಂಚನಾಮೆಯೊಂದಿಗೆ ಠಾಣೆಗೆ ಬಂದು ಚಾಸಾ-1 ರವರು ಠಾಣಾಧಿಕಾರಿಗೆ ವರದಿಯೊಂದಿಗೆ ವಶಕ್ಕೆ ನೀಡಿರುತ್ತೇನೆ. ಸಾಕ್ಷಿ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೆ ನಿಪಿ-2 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ವರದಿಯನ್ನು ನೋಡಿ ಗುರುತಿಸಿದ್ದು ನಿಪಿ-7 ಎಂದು, ಸಾಕ್ಷಿ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ವಶಪಡಿಸಿಕೊಂಡ ಟ್ರ್ಯಾಕ್ಟರನ್ನು ನೋಡಿದರೆ ಗುರುತಿಸುತ್ತೇನೆ. ಈಗ ನಾನು 04 ಫೋಟೋಗಳನ್ನು ನೋಡುತ್ತಿದ್ದು ಅವುಗಳಲ್ಲಿ ಕಾಣುವ ಟ್ರ್ಯಾಕ್ಟರನ್ನು ಆ ದಿನ ನಾವು ವಶಪಡಿಸಿಕೊಂಡಿರುತ್ತೇವೆ. ಸದರಿ ಫೋಟೋಗಳನ್ನು ಈಗಾಗಲೇ ನಿಪಿ-3 ರಿಂದ 6 ಎಂದು ಗುರುತಿಸಲಾಗಿದೆ.

ವಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ

ಚಾಸಾ-2 ಮತ್ತು 3 ರವರು ಯಾವ ಗ್ರಾಮದವರೆಂದರೆ ಸಾಕ್ಷಿ ಒಬ್ಬ ಪಂಚ ನೆಲೋಗಿ ಮತ್ತು ಇನ್ನೊಬ್ಬ ಪಂಚ ಹರವಾಳದವರು ಎಂದು ಹೇಳುತ್ತಾರೆ. ಚಾಸಾ-2 ಮತ್ತು 3 ರವರನ್ನು ನಾನು ಕರೆದ 15 ನಿಮಿಷಗಳ ನಂತರ ಬಂದಿರುತ್ತಾರೆ. ಆರೋಪಿತನು ನಮ್ಮಿಂದ ಎಷ್ಟು ಅಂತರದಿಂದ ಓಡಿ ಹೋಗಿರುತ್ತಾನೆ ಎಂದು ನನಗೆ ಹೇಳಲಾಗುವುದಿಲ್ಲ. ಮರಳು ತುಂಬುತ್ತಿದ್ದ ಜಾಗದಿಂದ ನಮ್ಮ ವಾಹನ 50 ಅಡಿ ಅಂತರದಲ್ಲಿತ್ತು. ಘಟನಾ ಸ್ಥಳ ಅಕ್ಕಪಕ್ಕದಲ್ಲಿ ಬೆಳೆ ಇರುವ ಜಮೀನುಗಳಿದ್ದು ಅಲ್ಲಿ ಅರ್ಧ ಕಿಮೀವರೆಗೆ ಟ್ರ್ಯಾಕ್ಟರ ಹೋಗುವುದಿಲ್ಲ ಎಂದರೆ ಸಾಕ್ಷಿ ರಸ್ತೆ ಇತ್ತು ಎಂದು ನುಡಿಯುತ್ತಾರೆ. ಘಟನಾ ಸ್ಥಳದ ಚೆಕಬಂದಿ ನನಗೆ ಗೊತ್ತಿಲ್ಲ. ಆರೋಪಿ ಮರುಳು ತುಂಬುವ ಸಮಯದಲ್ಲಿ ಬುಟ್ಟಿ ಹಾಗೂ ಸನಿಕೆ ಇದ್ದವಾ ಎಂದರೆ ಸಾಕ್ಷಿ ಚಾಲಕ ಮಾತ್ರ ಇದ್ದನು ಎಂದು ನುಡಿಯುತ್ತಾರೆ.

ಆ ದಿನ ನಾವು ದಾಳಿ ಮಾಡಿದೆವು ಆಗ ಟ್ರ್ಯಾಕ್ಟರ ಚಾಲಕನ ನಮ್ಮನ್ನು ನೋಡಿ ಓಡಿ ಹೋದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚರ ಸಮಕ್ಷಮ ವಾಹನವನ್ನು ವಶಪಡಿಸಿಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರಕಾರಕ್ಕೆ ಅಂಕಿ ಅಂಶ ಒದಗಿಸುವ ಉದ್ದೇಶದಿಂದ ಸುಳ್ಳು ಪ್ರಕರಣ ದಾಖಲು ಮಾಡಿದ್ದೇವೆ ಎಂದರೆ ಸರಿಯಲ್ಲ. ಆರೋಪಿಗೂ ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲದಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿರುವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ.ಇದೆ.

ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು
ಜೇವರ್ಗಿ